**<u>ಸಾಕ್ಷಿಯನ್ನು ದಿಃ 25.09.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ 1 ಪರ ಶ್ರೀ. ಎಂ.ಆರ್.ಎನ್ .ವಕೀಲರಿಂದ.</u>**

ಕಂದಾಯ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ. ನನ್ನ ಹೆಸರಿಗೆ ನನ್ನ ತಂದೆಯ ಬೇರೆ ಆಸ್ತಿಗಳು ಇರುವುದಿಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಅವರ ಸ್ವಾಧೀನವನ್ನು ಬಿಡಿಸಿಕೊಂಡುವಂತೆ ನಾನು ಪೊಲಿಸರಿಗೆ ದೂರನ್ನು ನೀಡಿರುವುದಿಲ್ಲ. ನನ್ನ ತಂದೆ ದಾವಾ ಸ್ವತ್ತಿನ ಸ್ವಾಧೀನದಲ್ಲಿರಲಿಲ್ಲವೆಂದರೆ ಸರಿಯಲ್ಲ. ನನ್ನ ತಂದೆಗೆ ಕ್ರಯ ಪತ್ರದ ಬಗ್ಗೆ ಗೊತ್ತಿತ್ತು. ನನ್ನ ತಂದೆ ಕ್ರಯ ಪತ್ರದ ಆಧಾರದ ಮೇರೆಗೆ ಖಾತೆ ಪಹಣಿ ಮಾಡಿಕೊಂಡುವಂತೆ ಅರ್ಜಿ ನೀಡಿರುವುದಿಲ್ಲ. 30 ವರ್ಷಗಳು ಹಿಂದೆ ನಮ್ಮ ಊರಿನ ಗ್ರಾಮಲೆಕ್ಕಾಧಿಕಾರಿಗೆ ದಾವಾ ಜಮೀನಿನ ಸ್ವಾಧೀನದಲ್ಲಿ ನಾವು ಇದ್ದಿರುವುದಾಗಿ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡುವಂತೆ ಅರ್ಜಿ ಕೊಟ್ಟು ಕೇಳಿಕೊಂಡಿರುತ್ತೇವೆ. ಸದರಿ ಅರ್ಜಿಯ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ ಎಂದರೆ ಸಾಕ್ಷಿ ನನಗೆ ಗೊತ್ತಾಗುತ್ತಿಲ್ಲವೆಂದು ಹೇಳುತ್ತಾರೆ.

ಸರ್ವೆ ನಂ 81 ರಲ್ಲಿ 3 ಪೋಡುಗಳು ಇರುತ್ತವೆ. ಸರ್ವೆ ನಂ 81/1 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ 81/3 ರಲ್ಲಿ 7 ಎಕರೆ 35 ಗುಂಟೆ ಇರುತ್ತದೆ. ಸರ್ವೆ ನಂ 81 ಪೋಡು ಆದ ವರ್ಷ ನನಗೆ ಗೊತ್ತಿರುವುದಿಲ್ಲ. ನನ್ನ ತಾತನ ಹೆಸರಿಗೆ ರಂಗಮ್ಮ ಅವರು ಕ್ರಯ ಪತ್ರ ಬರೆದುಕೊಟ್ಟಿದ್ದು ಅವರ ಹೆಸರಿಗೆ ಖಾತೆ ಪಹಣಿ ಇತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಪ್ರಕಾರ ರಂಗಮ್ಮ ಅವರ ಹೆಸರಿಗೆ ಎಷ್ಟು ವಿಸ್ತೀರ್ಣ ಜಮೀನು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಮಗೆ ರಂಗಮ್ಮ ಅವರು ಸರ್ವೆ ನಂ 81 ರಲ್ಲಿ 2 ಎಕರೆ ಮಾರಾಟ ಮಾಡಿರುತ್ತಾರೆ. ರಂಗಮ್ಮ ಅವರು ಬರೆದುಕೊಟ್ಟ ಕ್ರಯ ಪತ್ರದ ಸಮಯದಲ್ಲಿ ಸ್ಕೇಚ್ ಮಾಡಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಕಿತ್ನಾಮಂಗಳದ ಚಲುವಯ್ಯ ಅವರ ಜಮೀನು, ಪಶ್ಚಿಮಕ್ಕೆ ರಘುಪತಿಯವರ ಜಮೀನು, ಉತ್ತರಕ್ಕೆ ರಂಗಮ್ಮ ಅವರ ಜಮೀನು, ದಕ್ಷಿಣಕ್ಕೆ ಲಕ್ಕಪ್ಪ ಮತ್ತು ರಂಗಮ್ಮ ಅವರ ಜಮೀನು ಇರುತ್ತದೆ. ಈ ಮೇಲಿನ ಚಕ್ಕುಬಂದಿ ಈಗ ಅಸ್ತಿತ್ವದಲ್ಲಿರುತ್ತದೆ. ಸರ್ವೆ ನಂ 81/1 1 ನೇ ಪೊಡು ಎಷ್ಟು ಜಮೀನು ಬರುತ್ತದೆ ಎಂದರೆ ಸಾಕ್ಷಿ ಅಂದಾಜು 1 ಎಕರೆ 20 ಗುಂಟೆ ಬರುತ್ತದೆ ಎಂದು ಹೇಳುತ್ತಾರೆ. ನನ್ನ ತಾತನ ಹೆಸರಿಗೆ ಕ್ರಯ ಪತ್ರವಾದಾಗ ಸರ್ವೆ ನಂ 81 ರ ಯಾವ ಪೋಡುನಲ್ಲಿ ಅವರು ಖರೀದಿ ಮಾಡಿದ ಜಮೀನು ಬರುತ್ತದೆಂದು ಹೇಳಲು ಬರುವುದಿಲ್ಲವೆಂದರೆ ಸಾಕ್ಷಿ ಸರ್ವೆ ನಂ 81/2 ರಲ್ಲಿ ಬರುತ್ತದೆ ಎಂದು ಹೇಳುತ್ತಾರೆ.

1 ಎಕರೆ 38 ಗುಂಟೆಗೆ ಸಂಬಂಧಿಸಿದಂತೆ ಕ್ರಯ ಪತ್ರದ ಆಧಾರದ ಮೇರೆಗೆ ಈದಾವೆಯನ್ನು ಸಲ್ಲಿಸಿರುತ್ತೇನೆ. ನಿ.ಪಿ 14 ರಲ್ಲಿ ತೋರಿಸಿದ ವಿಸ್ತೀರ್ಣ 1 ಎಕರೆ 20 ಗುಂಟೆ ಆಗಿದ್ದು ಅದು ಸರ್ವೆ ನಂ 81/2 ರಲ್ಲಿ ಬರುವುದಿಲ್ಲವೆಂದರೆ ಸರಿಯಲ್ಲ. ನಮಗೆ ಕ್ರಯ ಮಾಡಿದ ರಂಗಮ್ಮ ಅವರಿಗೆ ಸರ್ವೆ ನಂ 81 ರಲ್ಲಿ ಎಷ್ಟು ವಿಸ್ತೀರ್ಣ ಇದ್ದು ಎಂದು ನನಗೆ ಗೊತ್ತಿರುವುದಿಲ್ಲ. ನಿ.ಪಿ 5 ರಿಂದ 12 ರಲ್ಲಿ ಕಂಡು ಬರುವ ಖದರಯ್ಯ ಪ್ರತಿವಾದಿಯ ಕುಟುಂಬದ ವಂಶಸ್ಥರು ಎಂದರೆ ಸರಿ. ಸದರಿ ದಾಖಲೆಗಳ ಕಾಲಂ ನಂ 12 ರಲ್ಲಿ ಕಂಡು ಬರುವ ವ್ಯಕ್ತಿಗಳ ಹೆಸರು ಪ್ರತಿವಾದಿಗಳ ಕುಟುಂಬಕ್ಕೆ ಸೇರಿರುತ್ತದೆ. ಸದರಿ ದಾಖಲೆಗಳಲ್ಲಿ ಚಿಕ್ಕಮಾರಯ್ಯ ಎನ್ನುವ ಹೆಸರು ಇದ್ದು ಅವರು ಯಾರೆಂದು ನನಗೆ ಗೊತ್ತಿರುವುದಿಲ್ಲ.

ವಾಯ್. ಎನ್. ನರಸಿಂಹಯ್ಯ ಅವರು ಸರ್ವೆ ನಂ 81/2 ರಲ್ಲಿ 13 ಗುಂಟೆಗೆ ಸಂಬಂಧಿಸಿದಂತೆ ಬೇರೆ ಪಹಣಿ ಪತ್ರಿಕೆಯನ್ನು ಮಾಡಿಸಿಕೊಂಡಿರುವ ವಿಚಾರ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಾದ ಬಳಿದ ಈ ದಾವೆ ಸಲ್ಲಿಸಿದ್ದೆನೆಂದು ಹೇಳುತ್ತಾರೆ. ವಾಯ್. ಎನ್. ನರಸಿಂಹಯ್ಯ ಅವರು ಸರ್ವೆ ನಂ 81/2 ರಲ್ಲಿ 13 ಗುಂಟೆಗೆ ಸಂಬಂಧಿಸಿದಂತೆ ಖಾತೆ ಮಾಡುವ ಮೊದಲು ಊರಿನಲ್ಲಿ ಪ್ರಚಾರ ಮಾಡಿದ್ದು ಈ ಬಗ್ಗೆ ನಾನು ಅವರ ಹೆಸರಿಗೆ ಖಾತೆ ಮಾಡಬೇಡಿ ಎಂದು ತಕರಾರು ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರಲಿಲ್ಲವೆಂದು ಹೇಳುತ್ತಾರೆ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ಪ್ರತಿವಾದಿಗಳು 70 ವರ್ಷ ಮೇಲ್ಪಟ್ಟು ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದಗೆ ಕಿವಿ ಕೇಳುತ್ತಿರಲಿಲ್ಲ ಆದ ಕಾರಣ ಖಾತೆ ಬದಲಾವಣೆಯನ್ನು ಮಾಡಿಸಿಕೊಂಡಿರುತ್ತಾರೆಂದು ಹೇಳುತ್ತಾರೆ.

ನಿ.ಪಿ 14 ರ ಮೂಲ ಪತ್ರ ಇರುವುದಿಲ್ಲ ಕಳೆದು ಹೋಗಿರುತ್ತದೆ. ಗಂಗಯ್ಯ ಅವರಿಗೆ ಪ್ರತಿವಾದಿ 2 ಮತ್ತು 3 ಅನ್ನು ಹೊರತು ಪಡಿಸಿ ಶಿವಣ್ಣ ಮತ್ತು ರಂಗಸ್ವಾಮಿ ಎನ್ನುವ ಮಕ್ಕಳು ಇದ್ದರು ಎಂದರೆ ಸರಿ. ಅವರನ್ನು ಈ ಪ್ರಕರಣದಲ್ಲಿ ಸೇರಿಸಲು ತೊಂದರೆ ಇಲ್ಲವೆಂದರೆ ಸಾಕ್ಷಿ ಗೊತ್ತಾಗುತ್ತಿಲ್ಲವೆಂದು ಹೇಳುತ್ತಾರೆ. ಸರ್ವೆ ನಂ 81 ಪೋಡು ಆದ ಬಗ್ಗೆ ಸ್ಕೇಚ್ ನ ಪ್ರತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲವೆಂದು ಹೇಳುತ್ತಾರೆ. ನಿ.ಪಿ 15 ರಿಂದ 17 ದಾಖಲೆಗಳನ್ನು ನನ್ನ ಅನುಕೂಲಕ್ಕೆ ತಂಕ್ಕಂತೆ ನಾನು ನೊಂದಣಿ ಕಚೇರಿಯ್ಲಿ ಬರೆಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ಕಾಲ ಮಿತಿ ಮೀರಿದ ದಾವೆಯಾಗಿದ್ದು ಊರ್ಜಿತ ಆಗುವುದಿಲ್ಲವೆಂದರೆ ಸರಿಯಲ್ಲ. ಈ ದಾವೆ ಯಾವುದೇ ವ್ಯಾಜ್ಯ ಕಾರಣ ಇಲ್ಲದೆ ಇದ್ದರು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ನಿ.ಪಿ 14 ದಾವೆ ಸರ್ವೆ ನಂ 81/2 ಕ್ಕೆ ಸಂಬಂಧಿಸಿದ್ದು ಆಗಿರುವುದಿಲ್ಲ ಮತ್ತು ಚಕ್ಕುಬಂದಿ ಬದಲಾಗಿರುತ್ತದೆ ಆದ ಕಾರಣ ದಾವೆ ಉರ್ಜಿತ ಆಗುವುದಿಲ್ಲವೆಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತು ಆಗಿದ್ದು ಅವರವರ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿದ್ದು ನಾನು ಸ್ವಾಧೀನದಲಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಗಳು ಮತ್ತು ನಮಗೆ ಜಮೀನು ಮಾರಾಟ ಮಾಡಿದ ರಂಗಮ್ಮ ಅವರು ಬೇರೆ ಬೇರೆ ಜನಾಂಗಕ್ಕೆ ಸೇರಿದವರು ಸಂಬಂದಿಗಳು ಆಗಿರುವುದಿಲ್ಲ. ಆದ ಕಾರಣ ದಾವೆ ವಜಾ ಆಗಿದ್ದಲ್ಲಿ ಯಾವುದೇ ತೊಂದರೆ ಇರುವುದಿಲ್ಲವೆಂದರೆ ಸರಿಯಲ್ಲ. ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಮಾಡಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.